
## ಬಡಾವಣೆಯ ಡಾಕ್ಟರ್



'ನಮ್ಮ ಬಡಾವಣೆಯಲ್ಲಿ ಮನೆ ಮಾಡಿದರೆ ಉತ್ತಮವಾದ ಗಾಳಿ, ಬೆಳಕು, ಶುದ್ಧ ನೀರು ಸಿಗುತ್ತದೆ. ಇಲ್ಲಿನ ವಾತಾವರಣವೂ ಎಷ್ಟು ಶುದ್ಧ ಎಂದರೆ ಇಲ್ಲಿನ ಜನಕ್ಕೆ ಕಾಯಿಲೆಯೇ ಗೊತ್ತಿಲ್ಲ' ಎಂದು ಹೊಸತಾಗಿ ಬಂದ ಬಾಡಿಗೆದಾರರಿಗೆ ಹೇಳುತ್ತಿದ್ದ ಮಾಲೀಕ. ಆಗ ಅಲ್ಲೊಬ್ಬ ನರಪೇತಲ ವ್ಯಕ್ತಿ ಕೆಮ್ಮುತ್ತ, ನಿತ್ರಾಣಗೊಂಡ ನಡಿಗೆಯಲ್ಲಿ ನಡೆದು ಬರುತ್ತಿದ್ದ. 'ಈಗ ತಾನೆ ಹೇಳಿದಿರಿ ಇಲ್ಲಿ ರೋಗಿಗಳೇ ಇಲ್ಲ ಅಂತ? ಮತ್ತೆ ಇವರು ಯಾರು?' ಎಂದು ಕೇಳಿದ ಬಾಡಿಗೆದಾರ. 'ಇವರು ನಮ್ಮ ಬಡಾವಣೆಯ ಡಾಕ್ಟ್ರು ಸ್ವಾಮಿ... ಪಾಪ, ವರ್ಷಗಳಿಂದ ರೋಗಿಗಳೇ ಇಲ್ಲದ ನೋವಿನಲ್ಲಿ ಹೀಗಾಗಿದ್ದಾರೆ' ಎಂದ ಮನೆಯೊಡೆಯ

**ಸಾವಿತ್ರಿ ಹೊಳ್ಳ**

## ಲೆಕ್ಕ ಸಿಗುತ್ತಿಲ್ಲ



ಗುಂಡ ರಾಷ್ಟ್ರೀಕೃತ ಬ್ಯಾಂಕ್ ಒಂದರಲ್ಲಿ ಕ್ಯಾಶಿಯರ್. ಅಂದಿನ ವಹಿವಾಟೆಲ್ಲ ಮುಗಿದ ಮೇಲೆ ಹಣದ ಲೆಕ್ಕಾಚಾರದಲ್ಲಿ ತೊಡಗಿದ್ದ. ದಿಢೀರೆಂದು ಒಳನುಗ್ಗಿದ ದರೋಡೆಕೋರರು ಅವನ ಮುಖಕ್ಕೆ ಬಂದೂಕು ಹಿಡಿದು, 'ಈಗ ನಿನ್ನ ಬಳಿ ಎಷ್ಟು ಹಣವಿದೆಯೊ ಅದನ್ನೆಲ್ಲ ಮರುಮಾತನಾಡದೇ ನಮಗೆ ಕೊಟ್ಟು ಬಿಡು, ಇಲ್ಲದಿದ್ದರೆ ನಿನ್ನ ತಲೆ ಉರುಳುತ್ತದೆ' ಎಂದು ಗುಡುಗಿದರು. ಗುಂಡ ದಯನೀಯ ದನಿಯಿಂದ, 'ಎಷ್ಟು ಬಾರಿ ಲೆಕ್ಕ ಮಾಡಿದರೂ ಎರಡು ಲಕ್ಷ ರೂಪಾಯಿ ಲೆಕ್ಕ ಸಿಗುತ್ತಿಲ್ಲ. ದಯವಿಟ್ಟು ಈ ಹಣದ ಜೊತೆಗೆ ಈ ಲೆಕ್ಕದ ಪುಸ್ತಕವನ್ನೂ ತೆಗೆದುಕೊಳ್ಳಿ, ಒಟ್ಟು ಎಷ್ಟು ಹಣ ದರೋಡೆ ಆಯ್ತು ಅಂತ ಬರೆದು ಬಿಡಿ ಪ್ಲೀಸ್' ಎಂದ.

**ಎಂ.ಕೆ. ಮಂಜುನಾಥ್**

ಚಿತ್ರಗಳು: ಗಣೇಶ ಆಚಾರ್ಯ